

## ಹಲವು ಮಕ್ಕಳ ತಾಯಿ

'ಬಾಲಕರಿಲ್ಲದ ಬಾಳೀದ್ಯಾತರ ಜನ್ಮ, ಬಾಡಿಗಿ ಎತ್ತು ದುಡಿದಂಗ, ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಾಂಗ' ಎಂದು ಪುರಾತನ ಕವಿಗಳು ಮಕ್ಕಳಿಲ್ಲದ ಮಹಿಳೆಯರ ಬಾಳನ್ನು ವರ್ಣಿಸಿದ್ದಾರೆ.

ಉಡುಪಿ ಜಿಲ್ಲೆಯ ಕುಂದಾಪುರದ ಹತ್ತಿರವಿರುವ ಕೋಟ ಎಂಬಲ್ಲಿ 'ಹಲವು ಮಕ್ಕಳ ತಾಯಿ' ಎಂದೇ ಪ್ರಸಿದ್ಧವಾಗಿರುವ ಅಮೃತೇಶ್ವರಿ ದೇವಿಯ ದೇವಸ್ಥಾನವಿದೆ. ಅಲ್ಲಿನ ಇತಿಹಾಸವೂ ವಿಶಿಷ್ಟವಾಗಿದೆ. ದೇವರ ಗರ್ಭಗುಡಿಯ ಸುತ್ತಲೂ ಪುಟ್ಟಪುಟ್ಟ ಲಿಂಗದಂತಿರುವ ಕಲ್ಲುಗಳು ಜನ್ಮ ತಾಳಿವೆ. ಮಾತ್ರವಲ್ಲ ವರ್ಷ ವರ್ಷವೂ ಅವುಗಳ ಬೆಳವಣಿಗೆಯಾಗುತ್ತಿರುವುದು ವಿಶೇಷ. ಮಕ್ಕಳಿಲ್ಲದವರು ದೇವಿಗೆ ಹರಕೆ ಹೊತ್ತ ನಂತರ ಅವರಿಗೆ ಸಂತಾನ ಭಾಗ್ಯ ಆಗಿರುವ ಉದಾಹರಣೆಗಳು ಬೇಕಾದಷ್ಟಿವೆ. ಮಗು ಹುಟ್ಟಿದ ನಂತರ ತಾಯಿ ಮಗುವಿನ ಸಮೇತ ಹೋಗಿ ಹರಕೆ ತೀರಿಸಿ ಬರಬೇಕಾದದ್ದು ಅಲ್ಲಿನ ಸಂಪ್ರದಾಯ. ದುಬಾರಿಯಲ್ಲದ ಹರಕೆಯನ್ನು ಹೊತ್ತು, ಮುದ್ದು ಕಂದನಿಗೆ ಜನ್ಮವಿತ್ತು ಸಾಕಷ್ಟು ಮಹಿಳೆಯರು ಸಂತೃಪ್ತರಾಗಿದ್ದಾರೆ.

–ಪುಷ್ಪ ಎನ್. ಕೆ. ರಾವ್, ಉಡುಪಿ

## ಚಾಲುಕ್ಯರ ಕಾಲದ ಶಿಲಾ ಶಾಸನ

ವಿಜಯನಗರ ಜಿಲ್ಲೆಯ ಹೂವಿನಹಡಗಲಿಯ ಚನ್ನಕೇಶವ ದೇವಸ್ಥಾನದಲ್ಲಿನ ಶಿಲಾಶಾಸನದ ಚಿತ್ರವಿದು. ಇದರ ಪ್ರಕಾರ, ಕ್ರಿ.ಶ. 1090ರಲ್ಲಿ ಚಾಲುಕ್ಯರ ಅರಸ ವಿಕ್ರಮಾದಿತ್ಯನ ಕಾಲದಲ್ಲಿ ರಬ್ಬಲಾದೇವಿ ಈ ಗುಡಿಯನ್ನು ನಿರ್ಮಿಸಿದರೆಂಬ ಮಾಹಿತಿ ಉಲ್ಲೇಖವಿದೆ. ಸೇನಾಪತಿಯಾಗಿದ್ದ ರವಿದೇವನ ಪತ್ನಿಯೇ ಈ ರಬ್ಬಲಾದೇವಿ. ಹೂವಿನಹಡಗಲಿಯ ಹಡಗಲಿ ಕೋಟೆಯನ್ನು ಆಳಿದಳು. ಆಗ ಈ ಸ್ಥಳಕ್ಕೆ 'ಪೂವಿನಪೊಸವಾಡಂಗಿಲೆ' ಎಂದು ಕರೆಯುತ್ತಿದ್ದರು. ಈ ಪಟ್ಟಣ ರಬ್ಬಲಾದೇವಿಯ ತವರೂರು ಆಗಿತ್ತಂತೆ.

ಅವರ ನೆನಪಿಗಾಗಿ ಪಟ್ಟಣದಲ್ಲಿ ಚನ್ನಕೇಶವ ದೇವಸ್ಥಾನ, ಶಶಿಧರ (ಮೂರುದೇವರ) ದೇವಸ್ಥಾನ, ಕಲ್ಲೇಶ್ವರ ದೇವಸ್ಥಾನ ನಿರ್ಮಿಸಲಾಗಿದ್ದು, ಈ ದೇಗುಲಗಳ ಶಿಲ್ಪಕಲೆಯು ಜಕಣಾಚಾರಿ ಕೈಚಳಕದಲ್ಲಿ ಸೊಗಸಾಗಿ ಕೆತ್ತನೆಗೊಂಡಿವೆ. ಕಾಲಾಂತರದಲ್ಲಿ 'ಪ' ಕಾರಕ್ಕೆ 'ಹ' ಒದಗಿ ಹೂವಿನಹಡಂಗಿಲೆ ಎಂದಾಯಿತು. ನಂತರ ವಿಜಯನಗರ ಅರಸರ ಕಾಲದಲ್ಲಿ ಹೂವಿನಹಡಂಗಿಲೆ ಹತ್ತಿರವೇ ವಿರೂಪಾಕ್ಷ ದೇವಾಲಯವಿದೆ. ವಿರೂಪಾಕ್ಷ ದೇವರಿಗೆ ಪೂಜೆ ಸಲ್ಲಿಸುವ ವೇಳೆಗೆ ತುಂಗಭದ್ರಾ ನದಿ ಮೂಲಕ ತೆಪ್ಪದಲ್ಲಿ ಮಲ್ಲಿಗೆ ಹೂವನ್ನು 'ಹೂವಿನಹಡಂಗಿಲೆ'ಯಿಂದ ಕಳಸಲಾಗುತ್ತಿತ್ತಂತೆ. ನಂತರ ದಿನಗಳಲ್ಲಿ ಕ್ರಮೇಣ 'ಹೂವಿನಹಡಂಗಿಲೆ' ಹೂವಿನಹಡಗಲಿ ಎಂದು ಪ್ರಸಿದ್ಧಿ ಹೊಂದಿದೆ.

–ಮೇಘನಾ ರಘುನಂದನ್, ಹೂವಿನಹಡಗಲಿ





## ಆನೆ ಸೌತೆಕಾಯಿ ಬಲ್ಲಿರಾ?

ದಾವಣಗೆರೆಯ ಸಿದ್ದವೀರಪ್ಪ ಬಡಾವಣೆಯ 8ನೇ ಕ್ರಾಸ್ ತಿರುವಿನಲ್ಲಿ ಇದ್ದ ಮರವೊಂದರಲ್ಲಿ ಜೋತುಬಿದ್ದ ದೊಡ್ಡ ಗಾತ್ರದ ಕಾಯಿಗಳು ಕಂಡವು. ಅದು 'ಮರ ಸೌತೆಕಾಯಿ / ಆನೆ ಸೌತೆಕಾಯಿ' ಎಂದರು. ಮಾರುಕಟ್ಟೆಯಲ್ಲಿ ಹಸಿರು ಬಣ್ಣದ ಸೌತೆಕಾಯಿ, ಸಾಂಬಾರ್ ಸೌತೆಕಾಯಿ (ಮಂಗಳೂರು ಸೌತೆಕಾಯಿ) ಬೆಂಗಳೂರಿನ ನೀರು ಸೌತೆ, ಮಿಡಿ ಸೌತೆಕಾಯಿಗಳನ್ನು (Gherkin) ನೋಡಿದ್ದೇವೆ. ಆದರೆ ಮರಸೌತೆ ಬಗ್ಗೆ ಗೊತ್ತಿರಲಿಲ್ಲ. ಈ ಮರ ಸೌತೆಕಾಯಿ ಬೇಲದ ಹಣ್ಣಿನ ಹೋಲಿಕೆ ಇತ್ತು. ಸಾಮಾನ್ಯವಾಗಿ ಕಾಡಿನಲ್ಲಿ ಈ ಮರಗಳು ಹೆಚ್ಚಾಗಿರುತ್ತವೆ. ಇವು ಹಣ್ಣಾದಾಗ ಆನೆಗಳು ತಿನ್ನುತ್ತವೆ. ಹೀಗಾಗಿಯೇ ಇದಕ್ಕೆ ಆನೆ ಸೌತೆಕಾಯಿ (Elephant Cucumber) ಎಂಬ ಹೆಸರುಂಟು. ಕಾಡಿನಲ್ಲಿರುವ ಮಂಗಗಳು, ಬಬೂನ್ ಗಳು, ಜಿರಾಫೆಗಳು, ಪಕ್ಷಿಗಳು ಹಾಗೂ ಇತರ ಜೀವಿಗಳು ವಿಶೇಷವಾಗಿ ನಾರಿನ ತಿರುಳನ್ನು ಇಷ್ಟಪಡುತ್ತವೆ. ಈ ಮರಕ್ಕೆ ಕಿಗೇಲಿಯಾ ಆಫ್ರಿಕಾನ ಎಂಬ ವೈಜ್ಞಾನಿಕ ಹೆಸರಿದೆ. ಆಂಗ್ಲ ಭಾಷೆಯಲ್ಲಿ ಸಾಸೇಜ್ ಟ್ರೀ ಅಂತಲೂ ಕರೆಯುತ್ತಾರೆ.

–ರಘುನಾಥರಾವ್ ತಾಪ್ಸೆ, ದಾವಣಗೆರೆ